OS No. 46/2024

DW-1

**(ಇಂದು ದಿಃ 28-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಮುಂದುವರೆದ ಮುಖ್ಯ ವಿಚಾರಣೆಃ- ಪ್ರತಿವಾದಿ ಪರ ಶ್ರೀ.BMP ವಕೀಲರಿಂದಃ-**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯಾಗಿ ಪ್ರತಿಜ್ಞಾ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನ್ನ ತಿಳುವಳಿಕೆಯ ಮೇರೆಗೆ ಬರೆಯಲ್ಪಟ್ಟಿರುತ್ತವೆ ಮತ್ತು ಅವು ಸತ್ಯವಾಗಿರುತ್ತವೆ. ಪ್ರತಿಜ್ಞಾ ಪತ್ರಕ್ಕೆ ಸಹಿ ಮಾಡಿರುತ್ತೇನೆ.

ದಿನಾಂಕ 02.12.2023 ರ ಹರಿದು ಜೊಡಿಸಿದ ನೋಂದಣಿ ಇಲ್ಲದ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲಾತಿಯನ್ನು ಗುರುತಿಸಲು ವಾದಿ ಪರ Sr. SKD ವಕಿಲರು ತಕರಾರು ಏತ್ತಿರುತ್ತಾರೆ. ಸದರಿ ತಕರಾರಿಗೆ ಒಳಪಟ್ಟು ಸದರಿ ದಾಖಲಾತಿಯನ್ನು ನಿಡಿ-1 ಎಂದು ಗುರುತಿಸಲಾಯಿತು. ದಿನಾಂಕ 02.12.2023 ರ ಹರಿದು ಜೊಡಿಸಿದ ರಶೀದಿಯನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲಾತಿಯನ್ನು ಗುರುತಿಸಲು ವಾದಿ ಪರ Sri. SKD ವಕೀಲರು ತಕರಾರು ಏತ್ತಿರುತ್ತಾರೆ. ಸದರಿ ತಕರಾರಿಗೆ ಒಳಪಟ್ಟು ಸದರಿ ದಾಖಲಾತಿಯನ್ನು ನಿಡಿ-2 ಎಂದು ಗುರುತಿಸಲಾಯಿತು. ದಿನಾಂಕ 02.12.2023 ರ ಹರಿದು ಜೊಡಿಸಿದ ನೋಂದಣಿ ಇಲ್ಲದ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲಾತಿಯನ್ನು ಗುರುತಿಸಲು ವಾದಿ ಪರ Sr. SKD ವಕಿಲರು ತಕರಾರು ಏತ್ತಿರುತ್ತಾರೆ. ಸದರಿ ತಕರಾರಿಗೆ ಒಳಪಟ್ಟು ಸದರಿ ದಾಖಲಾತಿಯನ್ನು ನಿಡಿ-3 ಎಂದು ಗುರುತಿಸಲಾಯಿತು. ದಿನಾಂಕ 02.12.2023 ರ ಹರಿದು ಜೊಡಿಸಿದ ರಶೀದಿಯನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲಾತಿಯನ್ನು ಗುರುತಿಸಲು ವಾದಿ ಪರ Sri. SKD ವಕೀಲರು ತಕರಾರು ಏತ್ತಿರುತ್ತಾರೆ. ಸದರಿ ತಕರಾರಿಗೆ ಒಳಪಟ್ಟು ಸದರಿ ದಾಖಲಾತಿಯನ್ನು ನಿಡಿ-4 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲ.**

**ಪಾಟೀ ಸವಾಲುಃ- ವಾದಿ ಪರ ಶ್ರೀ.SKD ವಕೀಲರಿಂದಃ-**

ಮೋಹನರಡ್ಡಿರವರು ನಿಪಿ-12 ರ ಪ್ರಕಾರ Sri. SKD ವಕೀಲರ ಮೂಲಕ ನನಗೆ ನೀಡಿದ್ದ ನೋಟಿಸ್ ನನಗೆ ಮುಟಿದೆ ಎಂದರೆ ಸರಿ. ಸದರಿ ನೋಟಿಸ್ ಗೆ ನಿಪಿ-14 ರ ಪ್ರಕಾರ ಉತ್ತರ ಕೊಟ್ಟಿದ್ದೇನೆ ಎಂದರೆ ಸರಿ. ಸದರಿ ನಿಪಿ-14 ತಯಾರಿಸಲು ಬಾವಿಕಟ್ಟೆ ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ ಎಂದರೆ ಸರಿ. ನಾನು ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಿದ್ದು ಅದನ್ನು ತಯಾರಿಸಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ನನ್ನ ಪ್ರತಿವಾದ ಪತ್ರದಲ್ಲಿ ನಿಡಿ-1 ಮತ್ತು 2 ರ ಬಗ್ಗೆ ಬರೆದಿಲ್ಲ ಎಂದರೆ ಹೇಳಲು ಆಗುವುದಿಲ್ಲ. ನಿಡಿ-1 ಮತ್ತು

2 ನ್ನು ಮೋಹನ್ ರಡ್ಡಿ ಹರಿದು ಹಾಕಿದ್ದರು. ಮೋಹನರಡ್ಡಿ ನಿಡಿ- 1 ಮತ್ತು 2 ನ್ನು ಹರಿದು ಹಾಕಿದರು ಎಂದು ನಾನು ಅವರ ವಿರುದ್ಧ ಪೊಲೀಸರಿಗೆ ದೂರು ನೀಡಿಲ್ಲ, ನನ್ನ ಪ್ರತಿವಾದ ಪತ್ರದಲ್ಲಿ ನಿಡಿ- 1 ಮತ್ತು 2 ನ್ನು ಿಮೋಹನರಡ್ಡಿ ಹರಿದು ಹಾಕಿದರು ಎಂದು ಹೇಳಿ ಬರಸಿಲ್ಲ ಎಂದರೆ ಹೇಳಲು ಆಗುವುದಿಲ್ಲ, ನಿಡಿ-1 ಮತ್ತು 2 ನ್ನು ಮೋಹನರಡ್ಡಿ ಯಾವ ಕಾರಣಕ್ಕೆ ಹರಿದು ಹಾಕಿದರು ಎಂದು ಹೇಳಿ ಬರೆಸಿಲ್ಲ ಎಂದರೆ ಹೇಳಲು ಆಗುವುದಿಲ್ಲ.

ನನ್ನ ವಕೀಲರು PW-1 ರ ಪಾಟೀ ಸವಾಲು ಮಾಡುವಾಗ ನಾನು ನ್ಯಾಯಾಲಯದಲ್ಲಿ ಹಾಜರಿದ್ದೆ ಎಂದರೆ ಸರಿ. PW-1 ರ ಪಾಟೀ ಸವಾಲಿನಲ್ಲಿ ನನ್ನ ವಕೀಲರು ನನಗೆ 25,00,000/- ಮುಟ್ಟಿಲ್ಲ ಎಂದು ಪ್ರಶ್ನೆ ಮಾಡಿಲ್ಲ ಮತ್ತು ಸೂಚನೆ ಮಾಡಿಲ್ಲ ಎಂದರೆ ಸರಿಯಲ್ಲ, ನಿಪಿ-14 ರಲ್ಲಿ 3,00,000/- ನಗದು ಮತ್ತು 22,00,000/- ರೂಪಾಯಿ ಚೆಕ್ ಮೂಲಕ ಮುಟ್ಟಿದೆ ಎಂದು ನಾನು ಒಪ್ಪಿ ಕೊಂಡಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೋಹನರಡ್ಡಿ ಮತ್ತು ರಂಗಾರಡ್ಡಿ ಖರೀದಿ ಮಾತುಕತೆ ಬಂದಿದ್ದಾಗ ಎಕರಗೆ 61,00,000/- ಎಂದು ಮಾತುಕತೆ ಆಗಿ ಒಪ್ಪಂದ ಆಗಿತ್ತು ಎಂದು ಹೇಳುತ್ತಾರೆ. 3,00,000/- ನಗದು ಹಣ ದಿನಾಂಕ 02.12.2023 ರಂದು ಮೋಹನರಡ್ಡಿ ಮತ್ತು ರಂಗಾರಡ್ಡಿ ಸೇರಿ ನನಗೆ ಕೊಟ್ಟಿದ್ದರು . 22,00,000/-ರೂಪಾಯಿ ಚೆಕ್ ನ್ನು ದಿನಾಂಕ 21.12.2023 ರಂದು ಮೋಹನರಡ್ಡಿ ಕೊಟ್ಟರು. ನಿಡಿ-1 ಮತ್ತು 2 ರಲ್ಲಿ ಬರೆದ ಸಂಗತಿಗಳು ಸರಿಯಾಗಿವೆ.

ದಾವಾ ಜಮೀನು ಕಲಬುರಗಿ ಕೋಡಂಗಲ್ ಮುಖ್ಯ ರಸ್ತೆಗೆ ತಾಗಿಕೊಂಡು ಇದೆ ಎಂದರೆ ಸರಿ. ಸದರಿ ರಸ್ತೆ ರಾಷ್ಟ್ರೀಯ ಹೆದ್ದಾರಿ ಎಂದರೆ ನನಗೆ ಗೊತ್ತಿಲ್ಲ. ಸದರಿ ರಸ್ತೆಯನ್ನು ಚತುಸ್ಪತ ರಸ್ತೆ ಮಾಡೆಬೇಕೆಂದು 4 ವರ್ಷಗಳ ಹಿಂದೆ ಮಂಜೂರಾತಿ ಸಿಕ್ಕಿದೆ ಎಂದರೆ ನನಗೆ ಗೊತ್ತಿಲ್ಲ, ಕಾರಣ ಈಗ ಇರುವ ರಸ್ತೆಯ ಮದ್ಯದಿಂದ ಎರಡು ಬದಿಗೆ ತಲಾ 300 ಅಡಿವರೆಗೆ ಜಮೀನು ಮಾರಾಟ ಮಾಡಲು ಯಾವುದೇ ಜಮೀನು ಮಾಲೀಕರಿಗೂ ಅಧಿಕಾರ ಇಲ್ಲ ಎಂದರೆ ಆ ಬಗ್ಗೆ ನಾವು ಮಾತನಾಡಿಲ್ಲ ಪಹಣಿಪಿ ಪ್ರಕಾರ ಮಾತಾನಾಡಿದ್ದೇವು ಎಂದು ಹೇಳುತ್ತಾರೆ. ನಿಪಿ-1(ಎ) ಸಹಿ ನನ್ನದು ಮತ್ತು ಅದರ ಪಕ್ಕದಲ್ಲಿರುವ ಹೆಬ್ಬಟ್ಟಿನ ಗುರುತು

ಕೂಡ ನನ್ನದು. ಸಾಕ್ಷಿ ನಿಪಿ-1 ರಲ್ಲಿರುವ ನಿಪಿ-1 (ಡಿ) ಸಹಿ ನನ್ನ ಹೆಂಡತಿಯದು ಎಂದು ಹೇಳಿರುತ್ತಾರೆ. ಸಾಕ್ಷಿ ಮುಂದುವರೆದು ನಾನು 22,00,000/- ರೂಪಯಿಗೆ ಚೆಕ್ ಪಡೆದುಕೊಂಡು ಹೆಬ್ಬಟ್ಟಿನ ಗುರುತು ಹಾಕಿ ಸಹಿ ಮಾಡಿದ್ದೇನೆ. Ex.P.2(a) ಸಹಿ ಮತ್ತು ಹೆಬ್ಬಟ್ಟಿನ ಗುರುತನ್ನು ಚೆಕ್ ಪಡೆದುಕೊಳ್ಳುವಾಗ ಹಾಕಿದ್ದೇನೆ. ನಿಪಿ-2 (ಸಿ) ನನ್ನ ಹೆಂಡತಿಯ ಸಹಿ ಎಂದರೆ ಸರಿ.

ನಿಡಿ-1 ಮತ್ತು 2 ರದ್ದು ಪಡಿಸಿ ಹರಿದು ಹಾಕಿದ ನಂತರ ನಿಪಿ-1 ಮತ್ತು 2 ನ್ನು ತಯಾರಿಸಿ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಿಡಿ-1 ಮತ್ತು 2ನ್ನು ರದ್ದು ಮಾಡಿಲ್ಲ ಎಂದು ಹೇಳುತ್ತಾರೆ.ನನ್ನ ಪ್ರತಿವಾದ ಪತ್ರ ತಯಾರಿಸುವಾಗ ಮತ್ತು ನಿಪಿ-14 ನೋಟಿಸ್ ಕೋಡುವಾಗ ನಿಡಿ-1 ಮತ್ತು 2 ನ್ನು ನಮ್ಮ ವಕೀಲಾರಾದ ಬಾವಿಕಟ್ಟಿಯವರಿಗೆ ಕೊಟ್ಟಿದ್ದೆ. ನಿಡಿ-1 ಮತ್ತು 2 ಕ್ಕೆ ಮಾಣಿಕರಡ್ಡಿ ಮತ್ತು ಲಾಲಪ್ಪ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ, ನಿಡಿ-3 ಮತ್ತು 4 ರಲ್ಲಿ ನನ್ನ ಮತ್ತು ನನ್ನ ಹೆಂಡತಿ ಸಹಿಗಳು ಇವೆ. ನಿಡಿ-3 ಮತ್ತು 4 ರ ಸಂಗತಿಗಳು ಸರಿಯಾಗಿವೆ . ಸದರಿ ಸಂಗತಿಗಳನ್ನು ನಮಗೆ ಓದಿ ಹೇಳಿದ ನಂತರ ಸಹಿ ಮಾಡಿದ್ದೇವೆ. ನಿಡಿ- 3 ಮತ್ತು 4 ರದ್ದು ಮಾಡಿಕೊಂಡಂ ಕಾರಣಕ್ಕೆ ಹರಿದು ಹಾಕಿದ್ದೇವೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಿಡಿ-3 ಮತ್ತು 4 ರದ್ದು ಆಗಿಲ್ಲ ಎಂದು ಹೇಳುತ್ತಾರೆ. ನಿಡಿ-3 ಮತ್ತು 4 ರಲ್ಲಿರುವ ರಂಗಾರಡ್ಡಿಗೆ ನಿಡಿ-3 ರ ಪ್ರಕಾರ ಬಾಕಿ 46,00,000/- ಹಣ ಕೋಡಿ ಎಂದು ನೋಟಿಸ್ ಕೊಟ್ಟಿದ್ದೆ, ಸಾಕ್ಷಿ ಮುಂದುವರೆದು ಆ ಬಗ್ಗೆ ರಂಗಾರಡ್ಡಿ ಜೊತೆಗೆ ಫೋನ್ ಮೇಲೆ ಕೂಡ ಮಾತನಾಡಿದ್ದೆ ಎಂದು ಹೇಳುತ್ತಾರೆ. ರಂಗಾರಡ್ಡಿ ಬಂದು ಮಾತನಾಡುತ್ತೇನೆ ಚೆಕ್ ಕಳೆದಿದೆ ಎಂದದು ಹೇಳಿದರು ಆದರೆ 46,00,000/ ರೂಪಾಯಿ ಕೊಟ್ಟಿಲ್ಲ, ಸಾಕ್ಷಿ ಮುಂದುವರೆದು ರಂಗಾರಡ್ಡಿ ನನಗೆ ಒಂದು ರೂಪಯಿ ಕೂಡ ಕೊಟ್ಟಿಲ್ಲ ಎಂದು ಹೇಳುತ್ತಾರೆ. ನಿಡಿ-2 ರಲ್ಲಿರುವ IInd ಪಾರ್ಟಿ ಕಳೆಗೆ ಮಾಡಿರುವ ಸಹಿ ಯಾರದ್ದು ನನಗೆ ಗೊತ್ತಿಲ್ಲ, ನಿಡಿ-1 ರಿಂದ 4 ನ್ನು ಸೇಡಂ ನ್ಯಾಯಾಲಯ ಆವರಣದಲ್ಲಿ ನೋಟರಿ ಮಾಡಿಸಿದ್ದೇವೆ. ನಿಡಿ-1 ರಿಂದ 4 ನ್ನು S R ಆವಂಟಿ ವಕೀಲರು ತಯಾರಿಸಿದ್ದರು.

ನಿಪಿ-1 ಮತ್ತು 2 ನ್ನು ಯಾರು ತಯಾರಿಸಿದರು ಎಂದರೆ ನನಗೆ ಗೊತ್ತಿಲ್ಲ. ನಾನು 22,00,000/- ಚೆಕ್ ಪಡೆದುಕೊಂಡು ನಿಪಿ-1 ಮತ್ತು 2 ಕ್ಕೆ ಸಹಿ ಮಾಡಿದ್ದೇನೆ. ನಿಪಿ-1 ರ 1 ಮತ್ತು 2 ನೇ ಪುಟದಲ್ಲಿ ಕಪ್ಪು ಪೆನ್ ನಿಂದ ಇರುವ ಕೈ ಬರಹ SR ಆವಂಟಿ ವಕೀಲರದ್ದು. ಸಾಕ್ಷಿ ಮುಂದುವರೆದು ಒಂದು ಸರ್ವೆ ನಂಬರ ಮರೆತು ಹೊಗಿತ್ತು ಕಾರಣ ಸೇರಿಸಿದ ನಂತರ ನಾನು ಆ ಜಾಗದಲ್ಲಿ ಸಹಿ ಮಾಡಿದ್ದೇನೆ ಎಂದು ಹೇಳುತ್ತಾರೆ.

ನನ್ನ ಮತ್ತು ಮೋಹನರಡ್ಡಿ ನಡುವೆ ಒಟ್ಟು 2 ಎಕರೆ 1 ಗುಂಟೆ ಜಮೀನಿನ ಮಾರಾಟಟಕ್ಕೆ ಮಾತುಕತೆ ಆಗಿ ಇಬ್ಬರು 85,00,000/- ರೂಪಾಯಿ ಗೆ ಖರೀದಿ ಒಪ್ಪಿ ಕೊಂಡು ಖರೀದಿ ಕಾಲಕ್ಕೆ ಅಳತೆ ಮಾಡಿಸಿದಾಗ ಒಂದುವೇಳೆ 2 ಎಕರೆ 1 ಗುಂನಟೆ ಜಮೀನು ಇರದೇ ಕಡಿಮೆ ಇದ್ದ ಪಕ್ಷದಲ್ಲಿ ಗುಂಟೆ ಲೆಕ್ಕದಲ್ಲಿ 85,00,000/- ರೂಪಾಯಿಲ್ಲಿ ಬೆಲೆ ಕಡಿಮೆ ಮಾಡಿ ಖರೀದಿ ಪತ್ರ ಬೆರದುಕೋಡುತ್ತೆನೆ ಎಂದು ನಾನು ಒಪ್ಪಿ ಕೊಂಡು ನಿಪಿ-1 ಮತ್ತು 2 ನ್ನು ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ರಂಗಾರಡ್ಡಿ ಮತ್ತು ಮೋಹನರಡ್ಡಿ ಗೆ ಎಕರೆಗೆ 61,00,000/- ರೂಪಾಯಿಗೆ ಜಮೀನು ಮಾರಾಟ ಮಾಡಲು ಒಪ್ಪಿ ಕೊಂಡಿದ್ದೆ ಅಗ್ರಿಮೆಂಟ್ ಆದ ನಂತರ ರಂಗಾರಡ್ಡಿ ಮತ್ತು ಮೋಹನರಡ್ಡಿ ಖಾಸಗಿಯಾಗಿ ಜಮೀನು ಅಳತೆ ಮಾಡಿಕೊಂಡಿದ್ದು ಆ ಗ ನಮ್ಮ ಜಮೀನು ರಸ್ತೆ ಆಚೆ ಯವರೆಗೆ ಬಂದಿದ್ದು ಆಗ ಅವರಿಬ್ಬರು ರಸ್ತೆ ಅಚೆಗಿನ ಜಮೀನು ಬಿಟ್ಟು ಖರೀದಿಕೋಡಲು ಕೇಳಿಕೊಂಡರು ನಾನು ಒಪ್ಪಿ ಕೊಳ್ಳಲಿಲ್ಲ ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೀ ಪ್ರಮಾಣ ಪತ್ರದ ಪ್ಯಾರಾ 13 ರಲ್ಲಿ ನಾನು ಮೊದಲ ಬಾರಿ ದಾವಾ ಜಮೀನು ಖರೀದಿ ಕೋಡಲು ಯಾವತ್ತು ಒಪ್ಪಿ ಕೊಂಡಿಲ್ಲ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ.

ದಾವಾ ಜಮೀನಿಗೆ ನಾನೇ ಮಾಲೀಕ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ಯಾರಾ 12 ರಲ್ಲಿ ದಾವಾ ಸ್ವತ್ತಿಗೆ ನಾನು ಮಾಲೀಕ ಅಲ್ಲ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಮೋಹನರಡ್ಡಿ ಮತ್ತು ರಂಗಾರಡ್ಡಿ ಸೇಲರಿ 3,00,000/- ನಗದು ಮತ್ತು ಮೋಹನರಡ್ಡಿ 22 ಲಕ್ಷ ರೂಪಯಿ ಚೆಕ್ ನ್ನು ದಾವಾ ಜಮೀನು ಮಾರಾಟ ಸಂಬಂದ

ಕೊಟ್ಟಿದ್ದರು. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ 13 ನೇ ಪ್ಯಾರಾದಲ್ಲಿ 3 ಲಕ್ಷ ನಕದು ಹಣವನ್ನು ಸಾಲದ ರೂಪದಲ್ಲಿ ಪಡೆದುಕೊಂಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನನಗೆ ಮೋಹನರಡ್ಡಿ , ಮಾಣೀಕರಡ್ಡಿ ಮತ್ತು ರಂಗಾರಡ್ಡಿ ಮೊಸ ಮಾಡಿದ್ದಾರೆ. ಆ ಮೂವರು ಪರಸ್ಪರ ಸಂಬಂಧಿಕರು. ನಮಗೆ ಗೊತ್ತಿಲ್ಲದ ರೀತಿಯಲ್ಲಿ ನಮ್ಮ ಬೆನ್ನ ಹಿಂದೆ ನಿಪಿ-1 ಮತ್ತ ು 2 ನ್ನು ತಯಾರಿಸಿ ನಮ್ಮ ಸಹಿಗಳನ್ನು ಪಡೆದುಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಪ್ರತಿವಾದಿಯರಿಗೆ ಹಣ ವಾಪಸ್ ಕೋಡುತ್ತೇನೆ ಎಂದು ಯಾವತ್ತು ಹೇಳಿಲ್ಲ, ನಾನು ಸಾಲ ಮಾಡಿದ್ದೇನೆ ಕಾರಣ ಜಮೀನು ಖರೀದಿ ಕೊಡುೀತ್ತೇನೆ ಎಂದದು ಅವರಿಗೆ ಹೇಳಿದ್ದೇನೆ. ನಾವು ಅಣ್ಣತಮ್ಮಂದಿರು ಬೇರೆ ಆದ ಕಾರಣ ಸಂಸಾರದ ಅಡಚಣೆಗಾಗಿ ಸಾಲ ಮಾಡಿದ್ದೆ.

ನನ್ನ ಮುಖ್ಯವಿಚಾರಣಾ ಪ್ರಮಾಣ ಪತ್ರದ ಪ್ಯಾರಾ 14 ರಲ್ಲಿ ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ, ಪ್ಯಾರಾ 14 ರಲ್ಲಿ ನಾನು 85 ಲಕ್ಷಕ್ಕೆ ಆಗಲಿ ಅಥವ ಇನ್ನಾವುದೆ ಬೆಲೆ ಗೆ ಆಗಲಿ ಮಾರಾಟ ಮಾಡಲು ಯಾವತ್ತು ಒಪ್ಪಿ ಲ ಎಂದು ಹೇಳಿ ಬರೆಸಿದ್ದೇನೆ ಎಂದರೆ ಸಾಕ್ಷಿ ನಾನು 85 ಲಕ್ಷಕ್ಕೆ ಮಾರಾಟ ಮಾಡಲು ಒಪ್ಪಿ ಲ್ಲ ಎಂದು ಹೇಳುತ್ತಾರೆ. ನಾನು ಜಮೀನು ಮಾರಾಟ ಮಾಡಲು ಒಪ್ಪಿ ಲ ಕಾರಣ 11 E ಸ್ಕೇಚ್ ಅರ್ಜಿ ಕೊಟ್ಟಿಲ್ಲ ಎಂದು ಹೇಳಿ ಬರೆಸಿದ್ದೇನೆ ಎಂದರೆ ನನಗೆ ಗೊತ್ತಿಲ್ಲ, ಸಾಲ ನನ್ನ ಅಣ್ಣ ಮಾಡಿದ್ದರು ಅವರು ಬಡ್ಡಿಗೆ ಮಾಡಿದ್ದರು ಅಥವ ಇಲ್ಲ ನನಗೆ ಗೊತ್ತಿಲ್ಲ, ನಾನು ವಾದಿಯಿಂದ 25 ಲಕ್ಷ ರೂಪಯಿ ಪಡೆದುಕೊಂಡು ಸಾಲ ಮರುಪಾವತಿ ಮಾಡಿದ್ದೇನೆ. ನಾನು ನಿಪಿ-1 ಮತ್ತು 2 ರ ಪ್ರಕಾರ ವಾದಿಯಿಂದ 25 ಲೀಕ್ಷ ರೂಪಾಯಿ ಹಣ ಪಡೆದುಕೊಂಡು ಅದರಿಂದ ನನ್ನ ಸಾಲ ಮರುಪಾವತಿ ಮಾಡಿ ನಂತರ ವಾದಿಗೆ ತೊಂದರೆ ಕೋಡುವ ಸಲುವಾಗಿ ನಿಪಿ-1 ಮತ್ತು 2 ರ ಪ್ರಕಾರ ಖರೀದಿ ವ್ಯವಹಾರ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ವಾದಿಯಿಂದ ಹಣ ಪಡೆದುಕೊಂಡು ಅದರಿಂದ ಲಾಭ ಮಾಡಿಕೊಂಡು ಈಗ ವಾದಿಯರಿಗೆ ವಾಪಸ್ ಹಣ ಕೋಡದೇ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ, ವಾದಿಗೆ ತೊಂದರೆ ಕೋಡುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ

OS No. 46/2024

DW-1

ಸರಿಯಲ್ಲ, ವಾದಿ ಹೈದ್ರಾಬಾದ್ ನಿವಾಸಿ ಯಾಗಿದ್ದು ನಾನು ಸ್ಥಳೀಯನಿದಜ್ಜು ಅದರ ದೂರುಪಯೋಗ ಪಡಿಸಿಕೊಂಡು ವಾದಿಗೆ ಹಣ ವಾಪಸ್ ಕೋಡದೆ ತೊಂದರೆ ಕೋಡುತ್ತಿದ್ದೇನೆ ಎಂದರೆ ಸರಿಯಲಲ.್ ವಾದಿ ರಂಗಾರಡ್ಡಿ, ಮಾಣಿಕ ರಡ್ಡಿ ನನಗೆಮೊಸ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಕಾರಣ ನಾನು ವಾದಿಗೆ ವರ್ಷ ಕ್ಕೆ 8 ಪ್ರತಿಶತಾ ಬಡ್ಡಿ ಸೇರಿಸಿ ಹಣ ಕೋಡಲು ಜವಬ್ದಾರಿ ಇದ್ದೇನೆ ಎಂದರೆ ಸರಿಯಲ್ಲ,

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**